## PAPERS LAID ON THE TABLE

SRI M. VEERAPPA MOILY (Minister for Finance and Planning):— Sir, on behalf of the Minister for Revenue and Agriculture, I beg to lay --

"Notification No, RB. REV/S.R 198 dated 7th May 1980. Remission of land revenue in certain Villages of Bagalkot Taluk Bijapur District for the year 1964-65 to 1976-77.

under section 194(2) of the Karnataka Land Revenue Act 1964."

SRI M. VEERAPPA MOILY (Minister for Finance and Planning): — Sir, I beg to lay :-

"The Karnataka Tax on Entry of Goods into a local Area for consumption use or sale therein Ordinance, 1980 (Ordinance No 5 of 1980)

as required under clause (2) (a) of article 213 of the Constitution of India."

SRI M. M. J. SADYOJATHA (Minister for Transport and Minor Irrigation) :—Sir, I beg to lay :-

"1) Notification No. HD 4 TMR 76 dated 4th May, 1980 The Karnataka Motor Vehicles (Fifth Amendment) Rules, 1980.

2) Notification No. HD 37 TMR 73 dated 14th May, 1980. The Karnataka Motor Vehicles (Sixth Amendment) Rules, 1980.

under section 133 (3) of the Motor Vehicles Act 1939."

## Calling attention to matters of urgent public Importance

*re: Prohibition of rearing of silk worms in Bangalore and Kolar District.*

SRI B. N. BACHE GOWDA.—Sir, I call the attention of the Minister of State for Sericulture and Youth Services to the situation which has arisen due to prohibition of rearing of Silk worms in 150 villages of Bangalore and Kolar Districts.

SMT. RENUKA RAJENDRAN (Minister of State for Sericulture and Youth Services) —I wish to make the following statement.

"ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ರೇಷ್ಮೆ ಹುಳು ಸಾಕಣೆಯನ್ನು ಎರಡು ತಿಂಗಳ ಕಾಲ ನಿಷೇಧಿಸಿರುವ ಮತ್ತು ಅದರ ಪರಿಣಾಮ ಹಾಗೂ ರಾಜ್ಯದ ಇನ್ನಿತರೆ ಸ್ಥಳಗಳಲ್ಲಿ ಅದರ ಹತೋಟಿ ಕ್ರಮಗಳ".

ಊಜಿ ನೊಣ (ಟ್ರೈಕೊಲೈಗಾ ಬಾಂಬೈಸಿಸ್)ವು ರೇಷ್ಮೆ ಹುಳುವಿನ ಮೇಲೆ ಪರಾವಲಂಬಿಯಾಗಿ ಬದುಕುವ ಡಿಪ್ಟೆರ ವರ್ಗಕ್ಕೆ ಸೇರಿದ ಕೀಟ. ಈ ಕೀಟವು ರೇಷ್ಮೆ ಹುಳುವಿನ ಮೇಲೆ ತನ್ನ ಆಹಾರಕ್ಕಾಗಿ ಬದುಕುವುದರಿಂದ ಇದು ಒಂದು ಭಯಂಕರ ಪಿಡುಗು ಎನಿಸಿದೆ. ರೇಷ್ಮೆ ಹುಳುವಿನ ದೇಹದ ಒಳಗೆ ಪರಾವಲಂಬಿಯಾಗಿ ಬದುಕುವ ಈ ಕೀಟದ ಹುಳು ಪೂರ್ಣ ಬೆಳವಣಿಗೆಯ ನಂತರ ತಾನು ಜೀವಿಸಿರುವ ಹುಳು ಅಥವಾ ರೇಷ್ಮೆ ಗೂಡನ್ನು ಕೊರೆದುಕೊಂಡು ಹೊರಬಂದು ರೇಷ್ಮೆ ಹುಳು ಅಥವಾ ಗೂಡನ್ನು ನಿಷ್ಕ್ರಿಯಗೊಳಿಸುತ್ತದೆ.

ಪಶ್ಚಿಮ ಬಂಗಾಳದಲ್ಲಿ ಈ ಊಜಿ ನೊಣ ಪರಾವಲಂಬಿಯು ೪೦ ವರ್ಷಗಳಿಂದಲೂ ಪಿಡುಗಾಗಿದೆ. ಕರ್ನಾಟಕದಲ್ಲಿ ಇದು ಕಂಡಿರಲಿಲ್ಲ. ೧೯೬೦ರ ಏಪ್ರಿಲ್–ಮೇ ತಿಂಗಳಲ್ಲಿ ಈ ನೊಣದ ಹುಳುಗಳು ಮಾರು ಕಟ್ಟೆಗೆ ಬಂದ ಗೂಡಿನ ರಾಶಿಯಲ್ಲಿ ಕಂಡು ಬಂದಿತು. ಇದರ ಮೂಲವನ್ನು ಪರಿಶೀಲಿಸಲಾಗಿ ಹೊಸ ಕೋಟೆ ತಾಲ್ಲೂಕಿನ ಬೈಲನರಸಾಪುರ ಗ್ರಾಮದಿಂದ ಪ್ರಾರಂಭವಾಗಿದೆಯೆಂದು ತಿಳಿದು ಬಂದಿತು. ಮುಂದುವರಿದ ವಿಚಾರಣೆಯು ಅನ್ವಯ ಬೈಲನರಸಾಪುರದ ಚಿಟ್ಟೆ ಕೊರೆದ ಗೂಡನ್ನು ವ್ಯಾಪಾರಿಗಳು ಪಶ್ಚಿಮ ಬಂಗಾಳದಿಂದ ನಿಸ್ತಾರಿ ಎಂಬ ತಳಿಯ ರೇಷ್ಮೆ ಗೂಡಿನ ಮೊಟ್ಟೆಯನ್ನು ಉತ್ಪಾದಿಸುವ ಸಲುವಾಗಿ ತಂದರೆಂದು ತಿಳಿದು ಬಂದಿತು. ಆಲ್ಲದೆ ಪಶ್ಚಿಮ ಬಂಗಾಳದ ಚಿಟ್ಟೆ ಕೊರೆದ ಗೂಡನ್ನು ಕೊಳ್ಳುವ ವ್ಯಾಪಾರಿಗಳು ಮತ್ತು ಸ್ಥಳೀಯ ವರ್ತಕರು ಒಂದೆಗೂಡಿ ಪಶ್ಚಿಮ ಬಂಗಾಳದಲ್ಲಿ ಸಾಕಣೆ ಮಾಡಲು ಈ ಮೊಟ್ಟೆಗಳನ್ನು ಉತ್ಪಾದಿಸಿಕೊಂಡು ಹೋದರೆಂದು ತಿಳಿದು ಬಂದಿತು. ಆವರ ಉದ್ದೇಶವು ಪಶ್ಚಿಮ ಬಂಗಾಳದ ನಿಸ್ತಾರಿ ಗೂಡು ಮತ್ತು ಕರ್ನಾಟಕದ ಬೈವೋಲ್ಟೈನ್ ತಳಿಯ ವಿಶ್ರ ತಳಿ ಉತ್ಪಾದಿಸುವುದಾಗಿ ಇದ್ದಿತು ತಿಳಿದುಬಂದಿರುವ ವಿಷಯದ ಅನುಸಾರ ಅವರು ಬೈಲನರಸಾಪುರದಲ್ಲಿ ಮೊಟ್ಟೆಗಳನ್ನು ಉತ್ಪಾದಿಸಿ ಪಶ್ಚಿಮ ಬಂಗಾಳಕ್ಕೆ ತೆಗೆದುಕೊಂಡು ಹೋಗಿರುತ್ತಾರೆ. ಊಜಿ ನೊಣದ ಹುಳುಗಳು ನಿಸ್ತಾರಿ ಗೂಡಿನಲ್ಲಿ ಇದ್ದು ಅವುಗಳು ಈ ಕಾರ್ಯದಲ್ಲಿ ಇಲ್ಲಿ ಉಳಿದು ತಮ್ಮ ಸಂತತಿಯನ್ನು ಹೆಚ್ಚಿಸಿಕೊಂಡು ಕೋಲಾರ ಮತ್ತು ಬೆಂಗಳೂರು ಜಿಲ್ಲೆಯಲ್ಲಿನ ರೇಷ್ಮೆ ಬೆಳೆಯುವ ಪ್ರದೇಶಗಳಲ್ಲಿ ವ್ಯಾಪಿಸಿವೆ. ಹೆಣ್ಣು ಊಜಿ ನೊಣವು ಸುಮಾರು ಎಂಟು ದಿನಗಳ ಕಾಲದಲ್ಲಿ ೩೦೦ ಮೊಟ್ಟೆಗಳನ್ನು ತಲಾ ಒಂದು ಅಥವಾ ಎರಡರಂತೆ ರೇಷ್ಮೆ ಹುಳುಗಳ ಮೇಲೆ ಇಡುತ್ತದೆ ಆದುದರಿಂದ ನೊಣವು ಒಂದು ಬಾರಿಗೆ ೩೦೦ ರೇಷ್ಮೆ ಹುಳುಗಳ ಮೇಲೆ ಮೊಟ್ಟೆ ಇಡಬಹುದಾಗಿದೆ. ಈ ಮೊಟ್ಟೆಗಳು ಅತಿ ಸಣ್ಣದಾಗಿದ್ದು ರೇಷ್ಮೆ ಹುಳುವಿನ ದೇಹದ ಮೇಲಿನಿಂದ ತೆಗೆಯುವುದು ಕಷ್ಟ. ಸಾಮಾನ್ಯವಾಗಿ ಈ ಮೊಟ್ಟೆಗಳನ್ನ ನೊಣವು ರೇಷ್ಮೆ ಹುಳುವಿನ ದೇಹದ ಉಂಗುರಗಳ ಮಧ್ಯೆ ಇಡುತ್ತದೆ. ಮೊಟ್ಟೆಗಳು ಎರಡು ದಿನಗಳಲ್ಲಿ ಒಡೆದು ಬರುವ ಹುಳುವು ರೇಷ್ಮೆ ಹುಳುವಿನ ದೇಹವನ್ನು ಕೊರೆದು ಒಳಗೆ ಪ್ರವೇಶಿಸುತ್ತದೆ. ಆಲ್ಲದೆ ಹುಳು ಒಳಹೊಕ್ಕ ಜಾಗವು ಕಪ್ಪನೆಯ ಸುಟ್ಟ ಗುರುತಾಗಿರುತ್ತದೆ. ಈ ಹುಳುವು ರೇಷ್ಮೆ ಹುಳುವಿನ ದೇಹದ ಒಳಗಿನ ಅಂಗಾಂಶಗಳನ್ನು ತಿಂದು ಬದುಕುತ್ತದೆ. ಸಾಮಾನ್ಯವಾಗಿ ಊಜಿ ನೊಣವು ಐದನೇ ಹಂತದ ರೇಷ್ಮೆ ಹುಳುಗಳ ಮೇಲೆ ಮೊಟ್ಟೆಗಳನ್ನು ಇಡುತ್ತದೆ.

ಐದನೇ ಹಂತದ ರೇಷ್ಮೆ ಹುಳುಗಳು ಸಿಗದಿದ್ದ ಪಕ್ಷದಲ್ಲಿ ಅವು ಇದಕ್ಕಿಂತ ಮೇಲಿನ ಹಂತದ ಹುಳುಗಳನ್ನು ಆರಿಸಿಕೊಳ್ಳುತ್ತವೆ. ಮೆಗ್ಗಾಟ್ ಎಂದು ಕರೆಯಲ್ಪಡುವ ಊಜಿ ನೊಣದ ಹುಳು ರೇಷ್ಮೆ ಹುಳುವಿನ ದೇಹದ ಒಳಗೆ ಒಂದು ವಾರಗಳ ಕಾಲ ಬದುಕಿ ಪೂರ್ಣ ಬೆಳವಣಿಗೆಯ ನಂತರ ರೇಷ್ಮೆ ಹುಳುವಿನ ದೇಹವನ್ನು ಕೊರೆದುಕೊಂಡು ಹೊರಬರುತ್ತದೆ ಇದರಿಂದಾಗಿ ರೇಷ್ಮೆ ಹುಳು ಸಾಯುತ್ತದೆ. ಊಜಿ ನೊಣದ ಹುಳುವು ರೇಷ್ಮೆ ಹುಳುವಿನ ಐದನೇ ಹಂತದ ಮೂರು ಅಥವಾ ನಾಲ್ಕನೇ ದಿನಗಳಲ್ಲಿ ಒಳ ಹೊಕ್ಕಿದ್ದರೆ ರೇಷ್ಮೆ ಹುಳು ಗೂಡು ಕಟ್ಟಿದ್ದು ಆದರ ಒಳಗೆ ಇರುತ್ತದೆ. ಈ ಹುಳುವು ಪೂರ್ಣ ಬೆಳವಣಿಗೆಯ ನಂತರ ಈ ಗೂಡನ್ನು ಕೊರೆದುಕೊಂಡು ಹೊರಬರುತ್ತದೆ. ಇದರಿಂದಾಗಿ ಗೂಡು ನಿಷ್ಪ್ರಯೋಜಕವಾಗುತ್ತದೆ. ಈ ರೀತಿ ರೇಷ್ಮೆ ಹುಳುವಿನ ದೇಹದಿಂದ ಹೊರ ಬಂದ ಊಜಿ ನೊಣದ ಹುಳುವು ಮಣ್ಣಿನ ಒಳಗೆ ಹೊಕ್ಕು ಕೋಶಾವಸ್ಥೆಗೆ ಒಂದು ದಿನದಲ್ಲಿ ಪರಿವರ್ತನೆ ಹೊಂದುತ್ತದೆ. ಇದರಿಂದ ನೊಣವು ಹತ್ತು ಅಥವಾ ಪದಿನಾಲ್ಕು ದಿನಗಳಲ್ಲಿ ಹೊರಬಂದು ತನ್ನ ಹೊಸ ಜೀವನ ಚಕ್ರವನ್ನು ಪ್ರಾರಂಭಿಸುತ್ತದೆ. ಈ ರೀತಿ ನೊಣದ ಜೀವನ ಚಕ್ರವು ಪೂರ್ಣಗೊಳ್ಳಲು ನವೆಂಬರ್‌ನಿನ ವಾತಾವರಣದಲ್ಲಿ ೧೭ ರಿಂದ ೨೩ ದಿನಗಳು ಸಾಕು.

ಈ ಪರಾವಲಂಬಿ ಕೀಟಕ್ಕೆ ರೇಷ್ಮೆ ಹುಳು ಒಂದೇ ಆಧಾರವೆಂದು ತಿಳಿದು ಬಂದಿದೆ. ಈ ಹುಳುವಿಗೆ ಬೇರೆ ಏನ್ನುವ ಪ್ರತಿಕೂಲ ಪ್ರಾಣಿಯೂ ಇಲ್ಲ. ಈ ಕೀಟವನ್ನು ನಾಶ ಮಾಡಲು ಯಾವುದೇ ಕೀಟ ನಾಶಕವೂ ಇಲ್ಲ. ಏಕೆಂದರೆ ಒಳಪಡಬಹುದಾದ ಯಾವುದೇ ಕೀಟ ನಾಶಕವೂ ರೇಷ್ಮೆ ಹುಳುವನ್ನು ಕೊಲ್ಲುತ್ತದೆ.

ಈ ನೊಣದ ಹತೋಟಿ ವಿಧಾನವನ್ನು ತಡೆಗಟ್ಟಲು ಕೇಂದ್ರ ರೇಷ್ಮೆ ಸಂಶೋಧನಾಲಯ ಮತ್ತು ತರಬೇತಿ ಸಂಸ್ಥೆಯ ಅಧಿಕಾರಿಗಳೊಡನೆ ಚರ್ಚಿಸಲಾಯಿತು. ಅದರಂತೆ ಕೀಟದ ಹಾವಳಿಗೆ ತುತ್ತಾಗಿರುವ ಪ್ರದೇಶಗಳಲ್ಲಿ ರೇಷ್ಮೆ ಹುಳ ಗಳನ್ನು ಇಲ್ಲದಂತೆ ಮಾಡುವುದರಿಂದ ಈ ನೊಣದ ಹೆಚ್ಚಳವನ್ನು ಸಾಧ್ಯವಿಲ್ಲವಾಗಿಯೂ ಅವಗಳು ಸಾಯುವುದಾಗಿಯೂ ತೀರ್ಮಾನಿಸಲಾಯಿತು. ಅದರಂತೆ ಹಾವಳಿಗೆ ತುತ್ತಾಗಿರುವ ಪ್ರದೇಶದ ಗ್ರಾಮಗಳನ್ನು ಗುರುತಿಸಲಾಯಿತು. ಬೈಲನರಸಾಪುರ ಕೇಂದ್ರದಿಂದ ಹತ್ತು ಕಿಲೋಮೀಟರ್ ಸುತ್ತಳತೆಯಲ್ಲಿನ ಪ್ರದೇಶದಲ್ಲಿ ಹತೋಟಿ ಕ್ರಮಗಳನ್ನು ಕೈಗೊಳ್ಳಲಾಯಿತು.

ಈ ಪ್ರದೇಶಗಳಲ್ಲಿನ ರೇಷ್ಮೆ ವ್ಯವಸಾಯಗಾರರನ್ನು ರೇಷ್ಮೆ ಹುಳುಗಳನ್ನು ಇನ್ನು ಎರಡು ತಿಂಗಳ ಕಾಲ ಸಾಕಬಾರದೆಂದು ಕೋರಿ, ಅದರಿಂದ ನೊಣಕ್ಕೆ ಏಕೈಕ ಜೀವನಾಧಾರವಾದ ರೇಷ್ಮೆ ಹುಳುವನ್ನು ಲಭ್ಯವಿಲ್ಲದಂತೆ ಮಾಡಿ ಅದನ್ನು ಸಾಯಿಸಲು ಸಹಕರಿಸಬೇಕೆಂದು ಕೋರಲಾಯಿತು. ಐದನೇ ಹಂತದ ೫-೬ ದಿನಗಳಲ್ಲಿ ಗೂಡು ಕಟ್ಟಲು ತಯಾರಾಗಿರುವ ಹುಳುಗಳನ್ನು ಬಿಟ್ಟು ಇನ್ನು ಉಳಿದ ಎಲ್ಲಾ ಹಂತದ ಹುಳುಗಳನ್ನು ಈ ಪ್ರದೇಶಗಳಲ್ಲಿ ನಾಶಪಡಿಸಲಾಯಿತು. ಗೂಡು ಕಟ್ಟಲು ತಯಾರಾಗಿರುವ ಹುಳು ಗಳನ್ನು ಈ ಪ್ರದೇಶದ ಹೊರಗೆ ಸೆಗೆದುಕೊಂಡು ಹೋಗಲು ಬಿಡದೆ ಗೂಡು ಕಟ್ಟಿದ ನಂತರ ಆ ಗೂಡು ಗಳನ್ನು ಆಯಾಯಾ ಗ್ರಾಮದಲ್ಲೇ ದಪ್ಪನೆಯ ಪ್ಲಾಸ್ಟಿಕ್ ಚೀಲದಲ್ಲಿ ನೊಣದ ಹುಳುಗಳು ಹೊರಬರದಂತೆ ಕೊಂಡು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಯಿತು ಈ ರೀತಿ ಸಂಗ್ರಹಿಸಿದ ಗೂಡುಗಳನ್ನು ಕೀಟದ ನೊಣವು ಹೊರಬರದಂತೆ ಅದನ್ನು ಅಲ್ಲೇ ಸಾಯಿಸಲು ಕೂಡಲೇ ಉಬ್ಬೆಗೆ ಒಳಪಡಿಸಲು ಕಳುಹಿಸಲಾಗುವುದು. ರೇಷ್ಮೆ ಹುಳುವಿನ ಸಾಕಣೆಯನ್ನು ತಪ್ಪಿಸುವುದಲ್ಲದೆ ಹುಳು ಸಾಕಣೆ ಮನೆಗಳಲ್ಲಿನ ಸಂದು, ಕಟ್ಟೆ ಮತ್ತು ಚಂದ್ರಿಕೆಗಳಲ್ಲಿ ಅಡಗಿರಬಹುದಾದ ಕೀಟದ ಹುಳು ಮತ್ತು ಕೋಶಾವಸ್ಥೆಗಳನ್ನು ನಾಶಪಡಿಸಲು ಬಿ.ಹೆಚ್.ಸಿ. ದ್ರಾವಣದ ಸಿಂಪರಣೆಯನ್ನು ಕೈಗೊಳ್ಳಲಾಗುತ್ತಿದೆ.

ರೇಷ್ಮೆ ಹುಳು ಸಾಕಣೆದಾರರಿಗೆ ನೊಣದ ಪಿಡುಗಿನ ಬಗ್ಗೆ ತಿಳಿಸುತ್ತಾ ಅವರು ನೊಣದ ಹಾವಳಿಯನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸಲಾಗುತ್ತಿದೆ. ನೊಣದ ಹಾವಳಿಯನ್ನು ತಪ್ಪಿಸಲು ರೇಷ್ಮೆ ಹುಳುವಿನ ಬಲೆಗಳನ್ನು ನಾಶಪಡಿಸಿದ ಸಂದರ್ಭದಲ್ಲಿ ಆ ರೈತರಿಗೆ ಸೂಕ್ತ ಪರಿಹಾರವನ್ನು ಕೊಡಲು ಸರ್ಕಾರವು ಆಲೋಚಿಸುತ್ತಿದೆ. ಬೆಂಗಳೂರು ಜಿಲ್ಲೆಯ ಹೊಸಕೋಟೆ ಮತ್ತು ದೇವನಹಳ್ಳಿ ತಾಲ್ಲೂಕು ಹಾಗೂ ಕೋಲಾರ ಜಿಲ್ಲೆಯ ಕೋಲಾರ ಮತ್ತು ಮಾಲೂರು ತಾಲ್ಲೂಕಿನ ಸುಮಾರು ೧೯೮ ಗ್ರಾಮಗಳು ನೊಣದ ಹಾವಳಿಗೆ ತುತ್ತಾಗಿದೆ ಎಂಬುದನ್ನು ಗಮನಿಸಲಾಗಿದೆ. ಈ ಪ್ರದೇಶಗಳಲ್ಲಿನ ಸಾಧ್ಯವಿರುವ ಗ್ರಾಮಗಳಲ್ಲಿಯೂ ಹತೋಟಿ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯವಾಗಬಹುದು.

ಇದುವರೆವಿಗೂ ಈ ನೊಣದ ಹಾವಳಿಯು ಬೇರೆ ರೇಷ್ಮೆ ವ್ಯವಸಾಯದ ಪ್ರದೇಶಗಳಲ್ಲಿ ಕಂಡು ಬಂದಿಲ್ಲ. ರಾಜ್ಯದ ರೇಷ್ಮೆ ಇಲಾಖೆಯ ಅಧಿಕಾರಿಗಳನ್ನು ರೇಷ್ಮೆ ವ್ಯವಸಾಯವಿರುವ ಎಲ್ಲಾ ಗ್ರಾಮಗಳನ್ನೂ ಪರಿಶೀಲಿಸಿ ನೊಣದ ಪಿಡುಗನ್ನು ತಡೆಗಟ್ಟಲು ಜಾಗರೂಕರಾಗಿರಬೇಕೆಂದು ತಿಳಿಸಲಾಗಿದೆ. ಅಲ್ಲದೆ ರಾಜ್ಯದ ಅಧಿಕಾರಿಗಳನ್ನು ರೇಷ್ಮೆ ವ್ಯವಸಾಯವಿರುವ ನೆರೆ ರಾಜ್ಯಗಳಾದ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಿಗೆ ಕಳುಹಿಸಿ ಅಲ್ಲಿ ಏನಾದರೂ ನೊಣದ ಪಿಡುಗು ಇದೆಯೇ ಎಂಬುದನ್ನು ಪರಿಶೀಲಿಸಲು ಮತ್ತು ಅಂತಹ ಕೀಟಗಳು ರಾಜ್ಯವನ್ನು ಪ್ರವೇಶಿಸದಂತೆ ವಿರ್ಪಡಿಸಲು ಕ್ರಮ ಕೈಗೊಳ್ಳಲಾಗಿದೆ. ತಮಿಳುನಾಡು ಮತ್ತು ಆಂಧ್ರ ಪ್ರದೇಶದ ರೇಷ್ಮೆ ಇಲಾಖೆ ಅಧಿಕಾರಿಗಳಿಗೆ ನೊಣದ ಹಾವಳಿಯನ್ನು ತಿಳಿಸಿದ್ದು ಈ ರೀತಿ ನೊಣದ ಹಾವಳಿ ಏನಾದರೂ ಕಂಡು ಬಂದಲ್ಲಿ ಕೈಗೊಳ್ಳಬೇಕಾದ ಅವಶ್ಯ ಹತೋಟಿ ಕ್ರಮಗಳನ್ನು ತಿಳಿಸಲಾಗಿದೆ.

ನೊಣದ ಹಾವಳಿಯು ಸಂಪೂರ್ಣವಾಗಿ ಹತೋಟಿಗೆ ಬರುವವರೆವಿಗೂ ಈ ಪ್ರದೇಶದ ಹತ್ತು ಕಿಲೋಮೀಟರ್ ಫಾಸಲೆಗಳಲ್ಲಿನ ರೈತರಿಗೆ ಸರ್ಕಾರಿ ಅಥವಾ ಖಾಸಗಿ ಬಿತ್ತನೆ ಉತ್ಪಾದಕರು ಮೊಟ್ಟೆ

ಗಳನ್ನು ನೀಡದಂತೆ ತಡೆಹಿಡಿಯಲಾಗಿದೆ. ಈ ಪ್ರದೇಶದ ರೈತರು ತಾವು ಬೆಳೆಯಬಹುದಾದ ಒಂದು ರೇಷ್ಮೆ ಬೆಳೆಯನ್ನು ಬಿಟ್ಟುಕೊಟ್ಟು ಇಲಾಖೆಯೊಡನೆ ಸಹಕರಿಸಿ ನೊಣದ ಹಾವಳಿಯನ್ನು ತಡೆಗಟ್ಟಲು ಒಂದು ತ್ಯಾಗವನ್ನು ಮಾಡಿದ್ದಾರೆ.

ಶ್ರೀ ಹೆಚ್, ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

† ಶ್ರೀ ಬಿ. ಎನ್. ಬಾಚೇಗೌಡ.—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಈ ಊಜಿ ನೊಣವನ್ನು ಗುರುತಿಸಿ ಅತಿ ತೀವ್ರವಾಗಿ ಕ್ರಮ ಕೈಗೊಂಡ ರೇಷ್ಮೆ ಇಲಾಖೆಯನ್ನು ಪ್ರಶಂಸಿಸುತ್ತೇನೆ. ಈ ಒಂದು ಭಯಂಕರ ರೋಗಕ್ಕೆ ನನ್ನ ತಾಲ್ಲೂಕಿನ ಸುಮಾರು ೧೫೦ ಗ್ರಾಮಗಳು ಮತ್ತು ಕೋಲಾರ ಜಿಲ್ಲೆಯ ಸುಮಾರು ೫೦ ಗ್ರಾಮಗಳು ತುತ್ತಾಗಿವೆ. ಪ್ರಥಮವಾಗಿ ಇಲಾಖೆಯವರು ಈ ಒಂದು ಕಾಯಿಲೆ ಬಂದ ಮೇಲೆ ತ್ವರಿತವಾಗಿ ಕ್ರಮ ಕೈಗೊಂಡಿದ್ದಾರೆಯೇ ವಿನಹ ಇದಕ್ಕೆ ಮೊದಲೇ ಅಂದರೆ ೪-೫ ವರ್ಷಗಳ ಹಿಂದೆ ಪಶ್ಚಿಮ ಬಂಗಾಳದಿಂದ ಒಂದು ನಾಟಿ ಗೂಡನ್ನು ತಂದು ಬಾಲನಾಥಪುರ ಗ್ರಾಮದಲ್ಲಿ ಮೊಟ್ಟೆ ಮಾಡಿ ವಾಪಸ್ಸು ತೆಗೆದುಕೊಂಡು ಹೋದವರ ಮೇಲೆ ಯಾವ ರೀತಿಯ ಕ್ರಮವನ್ನು ಕೈಗೊಂಡಿಲ್ಲ. ಈಗ ಇಲಾಖೆಯವರ ಗಮನಕ್ಕೆ ಬಂದ ಮೇಲೆ ಈ ಊಜಿ ನೊಣ್ಣವನ್ನು ಪತ್ತೆಮಾಡಿ ಮೊಟ್ಟೆ ಪಾಡವ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಇವತ್ತಿನ ದಿವಸ ನೂರಕ್ಕೆ ೭೦ರಷ್ಟು ಜನ ರೇಷ್ಮೆ ಬೆಳೆಯಿಂದ ಜೀವನ ನಡೆಸುತ್ತಿದ್ದ ೪-೫ ಸಾವಿರ ಕುಟುಂಬಗಳಿಗೆ ಬಹಳ ತೊಂದರೆಯಾಗಿದೆ. ಇಲಾಖೆಯವರು ನೇರವಾಗಿ ಅನೇಕ ಗ್ರಾಮಗಳಲ್ಲಿ ಧಳಿ ಮಾಡಿ ರೆ ಷ್ಮೆ ಬೆಳೆಯನ್ನು ನಾಶ ಮಾಡಿ ಈ ಒಂದು ರೋಗ ೧೦ ಕಿ.ಮೀ. ಘಾಸಲೆಯಿಂದ ಆಚೆ ಹೋಗದಂತೆ ತಡೆಗಟ್ಟಿದ್ದಾರೆ. ಆ ಒಂದು ಕಾರ್ಯದಲ್ಲಿ ರೈತರು ಸಹ ಸಹಕರಿಸಿದ್ದಾರೆ ಇವತ್ತಿನ ದಿವಸ ರೇಷ್ಮೆ ಬೆಳೆಯನ್ನೇ ಆವಲಂಬಿಸಿ ಜೀವನ ಮಾಡುತ್ತಿದ್ದ ರೈತರಿಗೆ ಸೂಕ್ತ ಪರಿಹಾರವನ್ನು ಹಣದ ರೂಪದಲ್ಲಿ ಕೊಡುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಸಂದರ್ಭದಲ್ಲಿ. ನಾನು ಆ ಒಂದು ಪರಿಹಾರ ಹಣವನ್ನು ಇವತ್ತು ರೇಷ್ಮೆ ಬೆಳೆ ಹಾನಿಯಾಗಿ ಕಂಗಾಲಾಗಿರುವ ರೈತರಿಗೆ ಅತಿ ಶೀಘ್ರವಾಗಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ನಾನು ಈ ಮೊದಲು ಹೇಳಿದ ಸುಮಾರು ೨೮೦ ಗ್ರಾಮಗಳ ಜೊತೆಗೆ ಮಾಲೂರು ಗ್ರಾಮವೂ ಸೇರುತ್ತದಾದ್ದರಿಂದ ಅದಕ್ಕೂ ಸಹ ಪರಿಹಾರ ಧನವನ್ನು ಸೇಡಬೇಕೆಂದು ಒತ್ತಾಯಿಸುತ್ತೇನೆ ಇವತ್ತು ನೀವು ೧೦ ಕಿ.ಮೀ. ಘಾಸಲೆಯನ್ನು ಇಟ್ಟಿದ್ದೀರಿ. ಆದರೆ ಅಲ್ಲಿರತಕ್ಕವರು ಬೇರೆ ಕಡೆ ಹೋಗಿ ಬೆಳೆಯನ್ನು ತೆಗೆಯುತ್ತಿದ್ದಾರೆ. ನನಗೆ ತಿಳಿದ ಮಾಹಿತಿ ಪ್ರಕಾರ ಈ ಒಂದು ರೋಗ ೧೦ ಕಿ ಮೀ.ಗೆ ಸೀಮಿತವಾಗಿರದೆ ಅದರಿಂದ ಆಚೆಗೆ ಸಹ ಹರಡಿದೆ. ಚಿಂತಾಮಣಿ ಮತ್ತು ಸಿಡ್ಲಘಟ್ಟ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕೂಡ ಈ ಒಂದು ಕಾಯಿಲೆ ವ್ಯಾಪಕವಾಗಿ ಹರಡುತ್ತಿದೆ ಆದ್ದರಿಂದ ಇಲಾಖೆಯವರು ೨ ತಿಂಗಳ ಕಾಲ ಮಂಡ್ಯ, ಕೋಲಾರ, ಮೈಸೂರು ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಎಲ್ಲ ಕಡೆ ಮೊಟ್ಟೆ ಮಾಡುವುದನ್ನು ನಿಯಂತ್ರಣ ಮಾಡಿದರೆ ಒಳ್ಳೆಯದೆಂದು ನನ್ನ ಒಂದು ಸಲಹೆ. ಈಗ ತಾನೇ ಮಾನ್ಯ ಮಂತ್ರಿಯವರು ಕಮ್ಮ ಹೇಳಿಕೆಯಲ್ಲಿ ಈ ಒಂದು ರೋಗವನ್ನು ನಿಯಂತ್ರಣ ಮಾಡಬಹುದೆಂದು ತಿಳಿಸಿದ್ದಾರೆ. ಹಾಗಾದರೆ ಎಷ್ಟು ಅವಧಿಯಲ್ಲಿ ಈ ಒಂದು ರೋಗವನ್ನು ಹತೋಟಿಗೆ ತರಬಹುದೆಂದು ಕೇಳುತ್ತೇನೆ. ಇಲಾಖೆಯವರು ಈ ಒಂದು ರೋಗವನ್ನು ತಡೆಗಟ್ಟುವುದಕ್ಕೆ ಏನು ಒಂದು ಅಧ್ಯಯನ ನಡೆಸಿ ಸಮರ್ಪಕವಾಗಿ ಕೆಲಸ ಮಾಡಿದ್ದಾರೆ ಅದಕ್ಕೆ ಅವರನ್ನು ಅಭಿನಂದಿಸುತ್ತಾ, ವೈಜ್ಞಾನಿಕ ರೀತಿಯಲ್ಲಿ ಇನ್ನೂ ಉತ್ತಮವಾದ ಯಾವುದಾದರೂ ರೂಪದಲ್ಲಿ ಈ ರೋಗವನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಂಡು, ಈ ಒಂದು ರೋಗದಿಂದ ತೊಂದರೆಯಾಗಿರುವ ರೈತರಿಗೆ ಸೂಕ್ತ ಪರಿಹಾರವನ್ನು ಹಣದ ರೂಪದಲ್ಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಳಿನೇ ಜ್ವರ ಬಂದಮೇಲೆ ಕೂಡ ಹುಳುಗಳನ್ನು ನಾಶ ಮಾಡಿದ್ದಾರೆಂಬ ಒಂದು ದೂರು ರೈತರಿಂದ ಬಂದಿದೆ. ೨ನೆಯದಾಗಿ, ರೈತರಿಂದ ಗೂಡನ್ನು ಕೊಂಡುಕೊಳ್ಳುವಾಗ ಚೌಕಾಸಿ ಬೆಲೆಗೆ ಅಂದರೆ ೧೮ ರಿಂದ ೨೯ ರೂಪಾಯಿಗಳವರೆಗೆ ಕೊಂಡಿದ್ದಾರೆಂಬ ಮತ್ತೊಂದು ದೂರು ಕೂಡ ಇದೆ. ಆದ್ದರಿಂದ ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಿತ್ರ ರೋಗ ಏನಿದೆ ಇದನ್ನು ಆದಷ್ಟು ಬೇಗ ದೂರ ಮಾಡಬೇಕೆಂದೂ ಮತ್ತು ೧೦ ಕಿ.ಮೀ.ಗಿಂತ ಆಚೆ ಹರಡಿದೆಯೇ ಇಲ್ಲವೇ ಎಂಬುದನ್ನು ಪರೀಕ್ಷೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮತ್ತೊಮ್ಮೆ ಒತ್ತಾಯಪೂರ್ವಕವಾಗಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ರಾಜೂಗೌಡ.—ಮಾನ್ಯ ಅಧ್ಯಕ್ಷರೇ, ಈಗತಾನೇ ಮಾನ್ಯ ಸಚಿವರು ಏನು ಹೇಳಿಕೆ ಕೊಟ್ಟರೋ ಅದನ್ನು ಕೇಳಿದ ಮೇಲೆ ನನ್ನ ಮನಸ್ಸಿನಲ್ಲಿ ಕೆಲವು ಸಂಶಯಗಳು ಉದ್ಭವವಾಗಿವೆ. ಆ ಬಗ್ಗೆ ನಾನು ಸ್ಪಷ್ಟೀಕರಣ ಕೇಳಬಯಸುತ್ತೇನೆ. ಅವರ ಹೇಳಿಕೆಯಲ್ಲಿ ಈ ಊಜಿ ನೊಣದ ಪಿಡುಗು ಒಹಳ ಹಿಂದೆಯೇ ಬೇರೆ ರಾಜ್ಯಗಳಲ್ಲಿ ಕಾಣಿಸಿಕೊಂಡಿತ್ತು ಎಂದು ಹೇಳಿದರು. ಹಿಂದೆ ಈ ನೊಣದ ಹಾವಳಿ ಬೇರೆ ರಾಜ್ಯದಲ್ಲಿದೆ ಎಂದು ಗೊತ್ತಾದಾಗ ಕರ್ನಾಟಕಕ್ಕೆ ಆ ಕಾಯಿಲೆ ಬರಬಹುದೆಂದು ಊಹಿಸಿ ಏಕೆ ಮುಂಜಾಗರೂಕತೆ ಕ್ರಮವನ್ನು ಕೈಗೊಳ್ಳಲಿಲ್ಲ? ನಿನೆಯದಾಗಿ ಯಾವ ಒಂದು ಭಾಗದಲ್ಲಿ ಈ ಒಂದು ಕಾಯಿಲೆ ಬೀರೂರಿದೆಯೋ ಅದನ್ನು ಕೇವಲ ೬೦ ದಿವಸದಲ್ಲಿ ತಡೆಗಟ್ಟಬಹುದೆಂದು ಹೇಳಿದರು. ೬೦ ದಿವಸದಲ್ಲಿ ತಡೆಗಟ್ಟಬಹುದೆಂದು ಯಾವ ಆಧಾರದ ಮೇಲೆ ಹೇಳಿದರೆಂದು ಕೇಳುತ್ತೇನೆ. ನಿನೆಯದಾಗಿ, ರೆಷ್ಮೆ ಹುಳು ಕೋಶಾವಸ್ಥೆಗೆ ಬಂದಾಗ ಅಂದರೆ ಳಿನೇ ಜ್ವರ ಬಂದಾಗ ಮಾತ್ರ ಊಜಿ ನೊಣ ಒಳಗಡೆ ಚುಚ್ಚಿ ಗೂಡನ್ನ ನಿಷ್ಕ್ರಿಯ ಮಾಡುತ್ತದೆಂದು ಹೇಳಿದರು. ಕೋಶಾವಸ್ಥೆಗೆ ಬಂದಾಗ ಮಾತ್ರವೇ ಏಕೆ ಊಜಿ ನೊಣ ಆ ರೀತಿ ಮಾಡುತ್ತದೆ ? ಬೇರೆ ಕಾಲದಲ್ಲಿ ಏಕೆ ಮಾಡುವುದಿಲ್ಲವೆಂದು ಸಂಶಯವಾಗಿದೆ. ಈ ಈ ಮೂರಕ್ಕೂ ಸಮಜಾಯಿಷಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

೫–೨೦ ಪಿ. ಎಂ.

ಶ್ರೀ ಎಸ್. ಗೋವಿಂದಗೌಡ.—(ವೇಮಗಲ್) ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರಾದ ಬಚೇಗೌಡರು ಮತ್ತು ಇತರ ಸ್ನೇಹಿತರು ಈ ವಿಚಾರದಲ್ಲಿ ಮಾತನಾಡಿದ್ದಾರೆ. ಕೋಲಾರ ಮತ್ತು ಬೆಂಗಳೂರು ಜಿಲ್ಲೆಯ ರೈತರ ಜೀವನಾಧಾರ ರೆಷ್ಮೆ ಬೆಳೆ ಎಂಬುದು ಎಲ್ಲರಿಗೂ ಗೊತ್ತಿದೆ. ಇಲಾಖೆಯ ಅಧಿಕಾರಿಗಳು ಬಹಳ ಬೇಗನೆ ರೆಷ್ಮೆ ಗೂಡಿಗೆ ಹರಡಿರುವ ರೋಗ ಯಾವುದು ಎಂಬುದನ್ನು ಕಂಡುಹಿಡಿದು ಅದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ. ಇದರಿಂದ ನಮಗೆ ಬಹಳ ಸಂತೋಷವಾಗಿದೆ ಮತ್ತು ಎಷ್ಟು ದಿವಸದಲ್ಲಿ ಈಗ ಹರಡಿರುವ ಕಾಯಿಲೆಯನ್ನು ವಾಸಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ತಿಳಿಸಿಕೊಡಲು ಎಂದು ಮಾನ್ಯ ಸ್ನೇಹಿತರು ಕೇಳಿದ್ದಾರೆ. ಸುಮಾರು ೫೦–೬೦ ವರ್ಷಗಳ ಹಿಂದೆ ಕಾಲರಾ ಮತ್ತು ಮಲೇರಿಯ ಬಂದು ಗ್ರಾಮಗಳಲ್ಲಿ ಯಾವ ರೀತಿ ಜನ ಸಾಯುತ್ತಿದ್ದರೋ ಅದೇ ರೀತಿಯ ಭಯ ಈ ಕಾಯಿಲೆಯಿಂದ ರೈತರಿಗೆ ಬಂದಿದೆ.

ಛೇರ್ಮನ್.—ಮಾನ್ಯ ಸದಸ್ಯರು ಈಗ ಸ್ಪಷ್ಟೀಕರಣ ಕೇಳುವುದಕ್ಕೆ ಅವಕಾಶವಿದೆಯೇ ಹೊರತು ಬೇರೆಯದಕ್ಕೆ ಅವಕಾಶವಿಲ್ಲ. ಮಾನ್ಯ ಸದಸ್ಯರು ತಮ್ಮ ಅಲೋಚನೆಗಳನ್ನು, ಭಾವನೆಗಳನ್ನು, ಅಭಿಪ್ರಾಯಗಳನ್ನು, ಮತ್ತು ಅನಿಸಿಕೆಗಳನ್ನು ವ್ಯಕ್ತಮಾಡುವುದನ್ನು ಬಿಟ್ಟು ತಮ್ಮ ಮಾತುಗಳನ್ನು ಸ್ಪಷ್ಟೀಕರಣದ ಬಗ್ಗೆ ಮಾತ್ರ ಸೀಮಿತಗೊಳಿಸಬೇಕು.

ಶ್ರೀ ಎಸ್. ಗೋವಿಂದಗೌಡ.—ರೈತರಿಗೆ ಬಂದು ರೀತಿ ಭಯ ಬಂದಿದೆ, ಆದ್ದರಿಂದ ಹೇಳುತ್ತಿದ್ದೇನೆ. ಅತೀ ಸಣ್ಣ ರೈತರು, ಬಡರೈತರು, ಕೂಲಿಕಾರರು ರೆಷ್ಮೆ ಬೆಳೆಯುತ್ತಿದ್ದರು. ಅವರಿಗೆ ಈ ಖಾಯಿಲೆ ಬಂದಿದ್ದರಿಂದ ನಷ್ಟವಾಗಿದೆ ಆದ್ದರಿಂದ ಅವರಿಗೆ ಪರಿಹಾರವನ್ನು ನೀಡಬೇಕೆಂಬುದು ಒಂದು ಸಲಹೆ. ಇನ್ನೊಂದು ಸಲಹೆ ಏನೆಂದರೆ ಈ ರೋಗವ್ಯಾಪಕವಾಗಿ ಹಬ್ಬದ ಹಾಗೆ ಮಾಡಬೇಕಾದರೆ ಇನ್ನು ೩–೪ ತಿಂಗಳ ಕಾಲ ರೇಷ್ಮೆ ಬೆಳೆಯನ್ನು ನಿಲ್ಲಿಸಬೇಕು ಎಂಬುದು.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಈ ಊಜಿ ನೊಣ ಬಾಗೇಪಳ್ಳಿಯಿಂದ ಕೋಲಾರ ಜಿಲ್ಲೆಗೆ ಬಂದಿದೆ. ನಾಲ್ಕನೇ ಜ್ವರದಿಂದ ಎದ್ದ ರೇಷ್ಮೆ ಹುಳುವಿನ ಮೇಲೆ ಇದು ಬೆಳೆಯುತ್ತದೆ ಎಂದು ಹೇಳುತ್ತಾರೆ. ಈ ರೆಷ್ಮೆ ಹುಳು ಬಿಟ್ಟು ಬೇರೆ ಯಾವುದರೂ ಜೀವಂತದಲ್ಲಿ ಇದು ಅವಲಂಬಿಸಿ ಜೀವಿಸುವುದಕ್ಕೆ ಅವಕಾಶವಿದೆಯೇ, ಈ ಬಗ್ಗೆ ಏನಾದರೂ ಸಂಶೋಧನೆ ನಡೆದಿದೆಯೇ? ರೇಷ್ಮೆ ಹುಳುವನ್ನು ಸಾಕುವುದನ್ನು ನಿಲ್ಲಿಸಿ ಅದರಿಂದ ಈ ರೋಗವನ್ನು ತಡೆಗಟ್ಟಬಹುದು ಎಂಬ ಅಭಿಪ್ರಾಯ ಇರಬಹುದು ಅದರೆ ರೇಷ್ಮೆ ಹುಳುವಲ್ಲದೆ ಬೇರೆ ಇನ್ಯಾವುದಾದರೂ ಜೀವಿಗಳ ಮೇಲೆ, ಬೇರೆ ರೀತಿಯಲ್ಲಿ ಸಂತಾನ ಉತ್ಪತ್ತಿ ಹೊಡುವುದಕ್ಕೆ ಸಾಧ್ಯವಿದೆಯೇ ಇಲ್ಲವೇ ಎಂಬ ಬಗ್ಗೆ ಸಂಶೋಧನೆ ನಡೆದಿದೆಯೇ? ಇದಕ್ಕೆ ನನಗೆ ಉತ್ತರ ಬೇಕು. ಈ ಊಜಿ ನೊಣ ಬಾಗೇಪಳ್ಳಿಯಿಂದ ಇಲ್ಲಿಗೆ ಬಂತು: ಖಾಸಗಿಯವರು ಏನೋ ಮಾಡುವುದಕ್ಕಾಗಿ ಮೊಟ್ಟೆಗಳನ್ನು ಪಶ್ಚಿಮ ಬಂಗಾಳದಿಂದ ತಂದರು ಎಂದು ಹೇಳಿದ್ದಾರೆ. ಖಾಸಗಿ ವ್ಯಾಪಾರಿಗಳು ಲಾಭದ ದೃಷ್ಟಿಯಿಂದ ವ್ಯವಹಾರ ಮಾಡುತ್ತಾರೆಯೇ ವಿನಹ ರೇಷ್ಮೆ ಗೂಡು ಬೆಳೆಯುವವರ ದೃಷ್ಟಿಯನ್ನು

ನೋಡುವುದಿಲ್ಲ. ಖಾಸಗಿಯವರು ವೆಂಟಿಲೇಟರ್‌ಗಳನ್ನು ಉತ್ಪತ್ತಿ ಮಾಡಿ ರೈತರಿಗೆ ಕೊಡುವ ಪದ್ಧತಿ ಇದೆ. ಆ ರೀತಿ ಖಾಸಗಿಯವರು ರೈತರಿಗೆ ಕೊಡುವ ಬದಲು ರೇಷ್ಮೆ ಇಲಾಖೆಯವರೇ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಏಕೆಂದರೆ ಈ ಇಲಾಖೆ ವ್ಯಾಪಾರಾಣಿಕರಾದ ಅಧಿಕಾರಿಗಳಿದ್ದಾರೆ. ಇದು ದೊಡ್ಡದಾಗಿ ಬೆಳೆದಿರುವ ಇಲಾಖೆ. ಅದ್ದರಿಂದ ಇದಕ್ಕೆ ಏನಾದರೂ ಏರ್ಪಾಟು ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀಮತಿ ರೇಣುಕಾ ರಾಜೇಂದ್ರನ್ ರೇಷ್ಮೆ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಬಾಚೇಗೌಡರು ಈ ಊಜಿ ನೊಣ ಹೇಗೆ ಬಂತು; ಪಶ್ಚಿಮ ಬಂಗಾಳದಲ್ಲಿ ಇದ್ದದ್ದು ನಮ್ಮ ರಾಜ್ಯಕ್ಕೆ ಹೇಗೆ ಬಂತು, ಇದನ್ನು ತಂದವರು ಯಾರು? ತಂದವರಿಗೆ ಶಿಕ್ಷೆ ವಿಧಿಸುವುದಕ್ಕೆ ಆಗುವುದಕ್ಕೆ ಆಗುವುದಿಲ್ಲವೇ ಎಂಬ ಪ್ರಶ್ನೆಯನ್ನು ನಮ್ಮ ಮುಂದಿಟ್ಟಿದ್ದಾರೆ ಈ ರೋಗ ಹರಡುವುದಕ್ಕೆ ಬಿರುಕುಬಿಟ್ಟ ಗೂಡುಗಳನ್ನು ಮಾರಾಟ ಮಾಡತಕ್ಕ ಮೂರು ಜನ ವರ್ತಕರಿದ್ದು, ಅವರನ್ನು ಈಗಾಗಲೇ ಕಂಡುಹಿಡಿದಿದ್ದೇವೆ. ಅವರ ಬಗ್ಗೆ ಕಾನೂನಿನನ್ವಯ ಕ್ರಮ ತೆಗೆದುಕೊಳ್ಳಬೇಕೆಂದು ನಮ್ಮ ಇಲಾಖೆಯ ನಿರ್ದೇಶಕರು ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ. ನಷ್ಟಕ್ಕೊಳಗಾದವರಿಗೆ ಪರಿಹಾರವನ್ನು ಬೇಗನೆ ಕೊಡಬೇಕೆಂದು ಮಾಡಿದ್ದೇವೆ. ಆ ಬಗ್ಗೆ ನಾನು ಹೇಳಿಕೆಯಲ್ಲೇ ಹೇಳಿದ್ದೇನೆ. ಪರಿಹಾರವನ್ನು ನಾವು ಶೀಘ್ರದಲ್ಲೇ ಕೊಡುವವರಿದ್ದೇವೆ. ಈ ಊಜಿ ನೊಣ ಚಿಂತಾಮಣಿ, ಶಿಡ್ಲಘಟ್ಟ ಭಾಗದಲ್ಲಿದೆ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಎಲ್ಲೆಲ್ಲಿದೆ ಎಂಬುದನ್ನು ತಿಳಿದುಕೊಂಡು ನಮ್ಮ ಗಮನಕ್ಕೆ ಬಂದ ತಕ್ಷಣ ಸೂಕ್ತ ವ್ಯವಸ್ಥೆಯನ್ನು ನಾವು ಖಂಡಿತ ಮಾಡುತ್ತೇವೆ. ಎರಡು ಮೂರು ತಿಂಗಳಲ್ಲಿ ಈ ನೊಣದ ಹಾವಳಿಯನ್ನು ತಡೆಗಟ್ಟುವುದಕ್ಕೆ ಸಾಧ್ಯವೇ ಎಂದು ಕೇಳಿದ್ದಾರೆ. ಈ ಊಜಿ ನೊಣದ ಜೀವನ ಚಕ್ರ ಇರುವುದೇ ೨೫ ದಿವಸಗಳು ೨೫ ದಿವಸದಲ್ಲಿ ಅವನ ಜೀವನ ಚಕ್ರ ಮುಗಿಯುತ್ತದೆ. ಅದ್ದರಿಂದ ಎರಡು ತಿಂಗಳೊಳಗೆ ಈ ರೋಗವನ್ನು ತಡೆಗಟ್ಟಬಹುದು ಎಂದು ಅಂದಾಜು ಹಾಕಿಕೊಂಡಿದ್ದೇವೆ. ಅಷ್ಟರೊಳಗೆ ನಿರ್ಮೂಲ ಆಗದಿದ್ದರೆ ಇಲಾಖೆ ವತಿಯಿಂದ ಏನು ಕಾರ್ಯಕ್ರಮವನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ ಈಗಾಗಲೇ ಇತರ ರಾಜ್ಯಗಳಲ್ಲೂ ಈ ನೊಣದ ಹಾವಳಿ ಇದ್ದು ಅದನ್ನು ನಿರ್ಮೂಲನ ಮಾಡುವುದಕ್ಕೆ ಸಂಬಂಧಪಟ್ಟಂತೆ ಯಾವ ಔಷಧಿಯನ್ನೂ ಕಂಡುಹಿಡಿದಿಲ್ಲ ಎಂದು ಹೇಳಿದ್ದಾರೆ ಪಶ್ಚಿಮ ಬಂಗಾಳದಲ್ಲಿ ಈಗಾಗಲೇ ನೊಣದ ಹಾವಳಿಯಿಂದ ರೇಷ್ಮೆ ಬೆಳೆಗೆ ಸಾಕಷ್ಟು ತೊಂದರೆಯಾಗಿದೆ. ಆದರೆ ಅವರು ಆ ಬಗ್ಗೆ ಯೋಚನೆ ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಈ ನೊಣದ ಹಾವಳಿ ಈಗತಾನೇ ಬಂದಿದೆ. ಬಂದ ತಕ್ಷಣ ಕೇಂದ್ರ ರೇಷ್ಮೆ ಸಂಶೋಧನಾಲಯದ ನರವಿನಿಂದ ಒಬ್ಬ ಡಾಕ್ಟರನ್ನು ಕರೆಸಿಕೊಂಡು ಬಿ.ಹೆಚ್.ಸಿ. ಪೌಡರನ್ನು ಸಿಂಪಡಿಸುವುದರಿಂದ ಇದನ್ನು ತಡೆಗಟ್ಟಬಹುದು ಎಂದು ಕಂಡುಹಿಡಿದು ಅದನ್ನು ಈಗಾಗಲೇ ಮಾಡುತ್ತಿದ್ದೇವೆ; ಮತ್ತು ಈ ರೀತಿ ಸಿಂಪಡಿಸಿ ಹತೋಟಿಗೆ ತಂದಿದ್ದೇವೆ ಎಂದು ಹೇಳಬಯಸುತ್ತೇನೆ. ಮಾನ್ಯ ರಾಮಗೌಡರು ಹೇಳುತ್ತಾ ಮೂರನೆ ಜ್ವರ ಮತ್ತು ನಾಲ್ಕನೇ ಜ್ವರದಲ್ಲಿ ಮಾತ್ರ ಈ ಹುಳ ತಿನ್ನುವುದರಿಂದ ಇದನ್ನು ನಾಶಪಡಿಸಿ ಎಂದು ಹೇಳಿದ್ದಾರೆ. ನಿಜ. ಈ ಹುಳ ಸಿನೇ ಮತ್ತು ಳನೇ ಜ್ವರದಲ್ಲಿ ಚೆನ್ನಾಗಿ ಹಣ್ಣಾಗುವಾಗ.....

ಶ್ರೀ ರಾಜುಗೌಡ.—೫ನೇ ಜ್ವರ ಬರುವುದೇ ಇಲ್ಲ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಚೆನ್ನಾಗಿ ಹಣ್ಣಾಗುವಾಗ ರುಚಿಕರವಾಗಿರುತ್ತದೆ ಎಂದೋ ಏನೋ ತಿನ್ನುತ್ತದೆ ಮಾನ್ಯ ಕೆ. ಹೆಚ್ ಹನುಮೇಗೌಡರು ಪ್ರಾತನಾಡುತ್ತಾ ಈ ಊಜಿ ನೊಣ ರೇಷ್ಮೆ ಗೂಡನ್ನು ಬಿಟ್ಟು ಬೇರೆ ಎಲ್ಲಾದರೂ ಜೀವಿಸುವುದಕ್ಕೆ ಸಾಧ್ಯವೇ ಎಂಬ ಬಗ್ಗೆ ಸಂಶೋಧನೆ ನಡೆದಿದ್ದಾರಾ ಎಂದು ಕೇಳಿದರು. ಅದು ರೇಷ್ಮೆ ಹುಳು ಬಿಟ್ಟು ಬೇರೆ ಏನೂ ತಿನ್ನುವುದಿಲ್ಲ. ತಿನ್ನುವ ಹಾಗಿದ್ದರೆ ರೇಷ್ಮೆ ಹುಳುವಿಗೆ ಈ ಖಾಯಿಲೆ ಬರುತ್ತಲೂ ಇರಲಿಲ್ಲ. ಈ ಹುಳದಲ್ಲಿ ಇರತಕ್ಕ ಗ್ಲಾಂಡ್ಸ್ ಮತ್ತು ಟಿಷ್ಯೂಗಳು ಚೆನ್ನಾಗಿ ಬೆಳೆದಿರುತ್ತವೆ. ಇದರಿಂದ ಜೀವಿಸತಕ್ಕ ನೊಣ ಇದಾಗಿರುವುದರಿಂದ ಇದರ ಬಗ್ಗೆ ತಡೆಗಟ್ಟುವ ಕ್ರಮವನ್ನು ನಮ್ಮ ಇಲಾಖೆ ತೆಗೆದುಕೊಂಡಿದೆ. ಬೇರೆ ಎಲ್ಲದರೂ ಈ ಖಾಯಿಲೆ ಇದ್ದರೆ ತಕ್ಷಣ ಯಾವುದಾದರೂ ತೊಂದರೆಗಳಿದ್ದರೆ ನನ್ನನ್ನಾಗಲೀ, ನಮ್ಮ ಇಲಾಖೆಯ ನಿರ್ದೇಶಕರನ್ನಾಗಲೀ ಸಂಪರ್ಕಿಸಿದರೆ ಸೂಕ್ತ ನೆರವನ್ನು ಕೊಡುತ್ತೇವೆ ಎಂದು ಹೇಳಬಯಸುತ್ತೇನೆ.